

# ಬಿಪಾಸಾ ಬರ್ತ್‌ಡೇ

ನಟಿಯರಿಗೆ ಖಾಸಗಿ ಕ್ಷಣಗಳು ಎನ್ನುವುದು ಇಲ್ಲವೆ? ಈ ಜನರೇಕೆ ಹೀಗೆ ನಮ್ಮ ಬೆನ್ನು ಬಿದ್ದಿದ್ದಾರೆ? ಚಿತ್ರನಟಿ ಆಗಿದ್ದೇನೆ ಎಂಬ ಒಂದೇ ಕಾರಣಕ್ಕಾಗಿ ನಾನು ನನ್ನ ಗೆಳೆಯ ಗೆಳತಿಯರ ಜತೆ ಖಾಸಗಿಯಾಗಿ ಸಂತೋಷದ ಕ್ಷಣಗಳನ್ನು ಕಳೆಯಬಾರದೆ?

–ಇವು ಬಾಲಿವುಡ್‌ನ 'ಸೆಕ್ಸೀ ಹೀರೋಯಿನ್' ಎಂದೇ ಖ್ಯಾತಿ ಹೊಂದಿರುವ ಬಿಪಾಸಾ ಬಸು ಕೇಳಿರುವ ಪ್ರಶ್ನೆಗಳು. ಹೀಗೆ ಪ್ರಶ್ನೆಗಳನ್ನು ಕೇಳಲೂ ಕಾರಣವಿದೆ. ಕಳೆದ ವಾರ ಆಕೆಯ ಬರ್ತ್‌ಡೇ ಪಾರ್ಟಿ ಮನೆಯಲ್ಲೇ ನಡೆಯಿತು. 33 ತುಂಬಿದ ಈ ಸುಂದರಿ ತನ್ನ ಅತ್ಯಂತ ಆಪ್ತರಾದ ಗೆಳೆಯ ಗೆಳತಿಯರನ್ನು ಪಾರ್ಟಿಗೆ ಕರೆದಿದ್ದಳು. ಪಾರ್ಟಿ ಎಂದ ಮೇಲೆ ಬರೀ ತರಕಾರಿ ತಿಂದುಕೊಂಡು ಕುಳಿತುಕೊಳ್ಳಲಾದೀತೆ? ಶಾಂಪೇನ್, ಬೀರ್, ಡ್ರಿಂಕ್ಸ್‌ಗಳ ಹೊಳೆ ಹರಿಯಿತು. ಜೋರು ಸಂಗೀತ, ಭರ್ಜರಿ ಡ್ಯಾನ್ಸ್, ಕೇಕೆ, ಗೌಜು ಗದ್ದಲಗಳೆಲ್ಲವೂ ಇದ್ದವು. ಡ್ಯಾನ್ಸ್ ಎಷ್ಟು ಜೋರಾಗಿತ್ತೆಂದರೆ ಬಿಪಾಸಾ ತನ್ನ ಗೆಳತಿಯರ ಜತೆ ಬಾತ್ ರೂಂನಲ್ಲೂ ಕುಣಿದು ಕುಪ್ಪಳಿಸಿದಳು!

–ಇವನ್ನೆಲ್ಲ 'ಅಂತೆ' ಎಂದು ಬರೆದಿಲ್ಲ ಏಕೆಂದರೆ, ಅಂತರ್ಜಾಲದಲ್ಲಿ ಈ ಖಾಸಗಿ ಪಾರ್ಟಿಯ ದೃಶ್ಯಗಳು 'ಲೀಕ್' ಆಗಿವೆ! ಲಕ್ಷಾಂತರ ಜನ ಈಗಾಗಲೆ ಪಾರ್ಟಿ ದೃಶ್ಯಗಳನ್ನು ಮನದಣಿಯೆ ಸವಿದಿದ್ದಾರೆ. ಹಾಗೆ ಪಾರ್ಟಿ ಸಂಭ್ರಮವನ್ನು ಸೋರಿಕೆ ಮಾಡಿದವರ ವಿರುದ್ಧ ಈಗ ಬಿಪಾಸಾ ಕೆಂಡ ಕಾರಿದ್ದಾಳೆ. ಬಿಪಾಸಾ ಕೇಕ್ ಕತ್ತರಿಸುವ ಮುನ್ನ ಕೈಯಲ್ಲಿ ಚಾಕು ಹಿಡಿದುಕೊಂಡು ಕುಣಿದದ್ದು, ಗೆಳೆಯರಾದ ಮಿಲಿಂದ್ ಸೋಮನ್, ಅಭಯ್ ಡಿಯೋಲ್, ಅಫ್ತಾಬ್ ಮುಂತಾದವರನ್ನು ತಬ್ಬಿಕೊಂಡು ಡ್ಯಾನ್ಸ್ ಮಾಡಿದ್ದು– ಎಲ್ಲವೂ ಈ ಸೋರಿಕೆಯಾದ ವೀಡಿಯೋದಲ್ಲಿದೆ. ಅದರಲ್ಲೂ ಇತ್ತೀಚೆಗೆ ಬಿಡುಗಡೆಯಾಗಿರುವ ತನ್ನ 'ಪ್ಲೇಯರ್ಸ್' ಚಿತ್ರದ ಹಾಡೊಂದಕ್ಕೆ ಬಿಪಾಸಾಳ ಭರ್ಜರಿ ಕುಣಿತ ವೀಡಿಯೋದ ಹೈಲೈಟ್.

'ನನ್ನ ಖಾಸಗಿ ಹಕ್ಕಿಗೆ ಭಂಗ ಬಂದಿದೆ. ಇದು ಹೇಗೆ ಲೀಕ್ ಆಯಿತೋ ನನಗೆ ಗೊತ್ತಾಗುತ್ತಿಲ್ಲ. ನಾನು ಅಪ್‌ಸೆಟ್ ಆಗಿದ್ದೇನೆ. ಈ ವಿಘ್ನಸಂತೋಷಿಗಳ ಬಗ್ಗೆ ರೋಷಗೊಂಡಿದ್ದೇನೆ' ಎಂದು ಬಿಪಾಸಾ ಕಿಡಿ ಕಾರಿದ್ದಾಳೆ.

# 'ಕೇಸ್ ಹಾಕ್ತೇನೆ'

ಇದೇ ರೀತಿಯ ಇನ್ನೊಂದು ಪ್ರಕರಣ ಈ ವಾರ ಸುದ್ದಿಯಾಗಿರುವುದು ಬಿಗ್ ಬಾಸ್ –5 'ರಿಯಾಲಿಟಿ ಷೋ'ನಲ್ಲಿ ಭಾಗವಹಿಸಿದ ನೀಲಿ ಚಿತ್ರಗಳ ತಾರೆ ಸನ್ನಿ ಲಿಯೋನ್ ಮತ್ತು ಟೀವಿ ಧಾರಾವಾಹಿಗಳ ತಾರೆ ಅಮರ್ ಉಪಾಧ್ಯಾಯನದ್ದು. ಬಿಗ್‌ಬಾಸ್ ಷೋನಿಂದ ಹೊರಬಿದ್ದ ಬಳಿಕ ಸನ್ನಿ ಮಾಡಿರುವ ಆಪಾದನೆ ಅಮರ್‌ಗೆ ಸಿಟ್ಟು ತರಿಸಿದೆ. 'ಬಿಗ್ ಬಾಸ್ ಮನೆಯಲ್ಲಿದ್ದಾಗ ಆ ಅಮರ್ ನನ್ನ ಸ್ಪರ್ಶ ಸುಖ ಪಡೆಯಲು ಹಾತೊರೆಯುತ್ತಿದ್ದ' ಎನ್ನುವುದು ಸನ್ನಿಯ ಹೇಳಿಕೆ. 'ಆಕೆಯೇನು ಸುರಸುಂದರಿಯೆ? ಗಂಡ ಎನ್ನುವವನ ಜತೆ ಚಕ್ಕಂದ ಆಡಿದ್ದನ್ನೇ ಜಗತ್ತಿಗೆ ಬಹಿರಂಗವಾಗಿ ತೋರಿಸಿ ಪ್ರಸಿದ್ಧಿಗೆ ಬಂದವಳು. ನನ್ನ ಬಗ್ಗೆ ಹೀಗೆ ಆರೋಪ ಮಾಡುವುದಕ್ಕೆ ಆಕೆಗೆಷ್ಟು ಧೈರ್ಯ? ಆಕೆಯ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂದು ಅಮರ್ ಗುಡುಗಿದ್ದಾನೆ.



ಅಷ್ಟಕ್ಕೇ ಅಮರ್ ಸುಮ್ಮನಾಗಿಲ್ಲ. 'ಆಕೆ ಪ್ರಚಾರಪ್ರಿಯೆ. ಈಗ ಹಲವಾರು ಹಿಂದಿ ಸಿನಿಮಾಗಳಲ್ಲಿ ಆಕೆಗೆ ನಿರ್ಮಾಪಕರು ಅವಕಾಶ ಕೊಟ್ಟಿದ್ದಾರೆ. ನಾಳೆ ಆ ನಿರ್ಮಾಪಕರ ವಿರುದ್ಧವೂ ಆಕೆ ಹೀಗೆ ಅಶ್ಲೀಲ ಆರೋಪಗಳನ್ನು ಮಾಡಲಿದ್ದಾಳೆ. ನಿರ್ಮಾಪಕರೇ ಹುಶಾರ್!' ಎಂದೂ ಎಚ್ಚರಿಕೆ ನೀಡಿದ್ದಾನೆ.

ಎರಡೂ ಪ್ರಕರಣಗಳ ಬಗ್ಗೆ ನೋ ಕಾಮೆಂಟ್ಸ್ ಎನ್ನುವುದೇ ಸೂಕ್ತವೇನೋ! ಹೀಗೆ ಬಾಲಿವುಡ್‌ನಲ್ಲಿ ನಟ– ನಟಿಯರು ಕೂಗಾಡುತ್ತಿದ್ದರೆ ಮಾಧ್ಯಮಗಳಿಗಂತೂ ಫುಲ್ ಖುಶ್!

■ ಬಿಂದು